**ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 14.11.2022.**
**ಪಾಟೀ ಸವಾಲುಃ 3 ನೇ ಪ್ರತಿವಾದಿಯಿಂದಃ**

3. ಸರ್ವೆ ನಂ.180/ಬಿ ಕೇರವಾಡ ಗ್ರಾಮದ 2 ಎಕರೆ 1 ಗುಂಟೆ ಆಸ್ತಿಯನ್ನು ಸುಮಾರು 20-25 ವರ್ಷಗಳ ಹಿಂದೆ ಸರ್ಕಾರದಿಂದ ಮಂಜೂರು ಆದ ಜಮೀನು. ಸದರಿ ಜಮೀನು ವಾದಿ , ಪ್ರತಿವಾದಿ 2 ಮತ್ತು 5 ರವರಿಗೆ ಮಂಜೂರು ಆಗಿದೆ. ಸದರಿ ಜಮೀನನ್ನು ನಮ್ಮ ಅಜ್ಜನ ಕಾಲದಿಂದ ನಾವು ಸಾಗುವಳಿ ಮಾಡುತ್ತಾ ಬಂದಿದ್ದೇವೆ. ನಮ್ಮ ತಂದೆ ತನ್ನ ಜೀವಂತ ಕಾಲದಲಿಲ ಸದರಿ ಜಮೀನನ್ನು ಸಾಗುವಳಿ ಮಾಡುತ್ತಿದ್ದರು ಅವರು ತೀರಿಕೊಂಡ ನಂತರ ನಾನು ಸಾಗುವಳಿ ಮಾಡುತ್ತಿದ್ದೇನೆ. ಸದರಿ ಜಮೀನಿನಲ್ಲಿ ಕಬ್ಬು ಬೆಳೆ ಬೆಳೆಯುತ್ತಿದ್ದೇವೆ. ಸದರಿ ಬೆಳೆಯನ್ನು ಕಾರ್ಖಾನೆಗೆ ಪ್ರತಿವಾದಿ 2 ನನ್ನ ಅಣ್ಣನ ಹೆಸರಿನಲ್ಲಿ ಮಾರಾಟಕ್ಕೆ ಕಳುಹಿಸಲಾಗುತ್ತಿತ್ತು. ಸರ್ವೆ ನಂ.55/1 ಕಸಮಳಗಿ ಗ್ರಾಮದ ಆಸ್ತಿಯಲ್ಲಿ ಕಬ್ಬು ಬೆಳೆ ಬೆಳೆಯಲಾಗುತ್ತಿತ್ತು. ಸದರಿ ಬೆಳೆಯನ್ನು ಕಾರ್ಖಾನೆಗೆ ಪ್ರತಿವಾದಿ 2 ನನ್ನ ಅಣ್ಣನ ಹೆಸರಿನಲ್ಲಿ ಮಾರಾಟಕ್ಕೆ ಕಳುಹಿಸಲಾಗುತ್ತಿತ್ತು. ಸರ್ವೆ ನಂ.82/1, 82/2 ಹಾಗೂ 82/3 ಜಮೀನುಗಳನ್ನು ಸರ್ವೆ ನಂ. 180 ಜಮೀನಿನ ಆದಾಯದಿಂದ ಖರೀದಿಸಲಾಗಿದೆ. ನಾನು ನಮ್ಮ ಜಮೀನಿನ ಪಕ್ಕದ ಬಾಳಪ್ಪಾ ಕಮ್ಮಾರ, ಪ್ರಲಾದ ಬಡಸ್ಕರ, ಈರಪ್ಪಾ ಬಡಸ್ಕರ, ಪರಶುರಾಮ ಬಡಸ್ಕರ ರವರ ಜಮೀನುಗಳನ್ನು ಸಹ ನಾನು ಪಾಲಿಗಾಗಿ ಮಾಡುತ್ತಿದ್ದೆ. ನಾನು ಸದರಿ ಜಮೀನುಗಳಲ್ಲಿ ಸಹ ಕಬ್ಬು ಬೆಳೆಯನ್ನು ಬೆಳೆಸುತ್ತಿದ್ದೆ. ಸದರಿ ಜಮೀನುಗಳ ಬೆಳೆಗಳನ್ನು ಕಾರ್ಖಾನೆಗೆ ಪ್ರತಿವಾದಿ 2 ನನ್ನ ಅಣ್ಣನ ಹೆಸರಿನಲ್ಲಿ ಮಾರಾಟಕ್ಕೆ ಕಳುಹಿಸಲಾಗುತ್ತಿತ್ತು.

4. ಸರ್ವೆ ನಂ.210 ಸನ 1982 ರಲ್ಲಿ ಖರೀದಿಸಲಾಗಿದೆ. ನಾವೆಲ್ಲ ಸಹೋದರರು ಒಟ್ಟು ಕುಟುಂಬದಲ್ಲಿ ವಾಸ ಇದ್ದೇವೆ ಬೇರೆ ಆಗಿಲ್ಲ. ಪ್ರತಿವಾದಿ 2 ಹುಬ್ಬಳ್ಳಿಯಲ್ಲಿ ವಾಸ ಇರುತ್ತಾರೆ. ಪ್ರತಿವಾದಿ 2 ರವರ ಶಿಕ್ಷಣ ನಮ್ಮ ತಂದೆ ಮಾಡಿಸಿದ್ದಾರೆ. ಎಂ ಜಿ ಬ್ಯಾಂಕ ಬೀಡಿಯಲ್ಲಿ ಕಬ್ಬು ಬೆಳೆಯಿಂದ ಬಂದ ಆದಾಯವನ್ನು ಪ್ರತಿವಾದಿ 4 ರವರ ಹೆಸರಿನಲ್ಲಿ ಠೇವಣಿ ಮಾಡಲಾಗಿದೆ. ಹುಬ್ಬಳ್ಳಿಯಲ್ಲಿ ಜಾಗ ಖರೀದಿಸಲು ನಾನು ಖರ್ಚು ಮಾಡಿದ್ದೇನೆ. ಹುಬ್ಬಳಿಯ ಜಾಗವನ್ನು ಪ್ರತಿವಾದಿ 2 ರವರ ಹೆಸರಿನಲ್ಲಿ ಖರೀದಿಸಲಾಗಿತ್ತು. ಸದರಿ ಜಾಗದಲ್ಲಿ ಮನೆ ಕಟ್ಟಲು ನಾನು ಖರ್ಚು ಮಾಡಿದ್ದೇನೆ. ದಾವಾ ಆಸ್ತಿಗಳಲ್ಲಿ ಖರೀದಿಸಲಾದ ಆಸ್ತಿಗಳು, ಒಟ್ಟು ಕುಟುಂಬದ ಆಸ್ತಿಗಳ ಆದಾಯದಿಂದ, ಪ್ರತಿವಾದಿ 2 ರವರ ಹೆಸರಿನಲ್ಲಿ ಖರೀದಿಸಲಾಗಿದೆ ಎಂದರೆ ನಿಜ. ಪ್ರತಿವಾದಿ 2 ರವರು ಏನು ಕೆಲಸ ಮಾಡುವುದಿಲ್ಲ.

**ಪಾಟೀ ಸವಾಲುಃ 6 ರಿಂದ 12 ನೇ ಪ್ರತಿವಾದಿ ಪರ ಶ್ರೀ.ಪಿ.ಜಿ.ಎ ವಕೀಲರಿಂದಃ**

5. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಪೂರ್ಣ ಮಾಹಿತಿ ಇದೆ. ಈ ದಾವೆ ಸಲ್ಲಿಸುವಾಗ ಪ್ರತಿವಾದಿ 5 ರವರು ವಾದ ಪತ್ರಕ್ಕೆ ಸಹಿ ಮಾಡಿ ಈ ದಾವೆಯನ್ನು ಸಲ್ಲಿಸಿದ್ದರು. ಸರ್ವೆ ನಂ.50/1 ವಿ. 3 ಎಕರೆ ಚಿಲ್ಲರೆ ಗುಂಟೆ ಇದೆ. ಸದರಿ ಆಸ್ತಿಯನ್ನು ನಮ್ಮ ತಂದೆ 1972 ರಲ್ಲಿ ಖರೀದಿ ಮಾಡಿದ್ದಾರೆ. ಸರ್ವೆನಂ.55/1 ವಿ.1 ಎಕರೆ 18 ಗುಂಟೆ ನಮ್ಮ ತಂದೆ ಖರೀದಿ ಮಾಡಿದ್ದರು. ನಮ್ಮ ತಂದೆ ಹಾಗೂ ಅವರ ಸಹೋದರರ ನಡುವೆ 1981 ರಲ್ಲಿ ಪಾಲು ವಾಟ್ನಿ ಆಗಿದೆ. ಸದರಿ 1981 ರ ಪಾಲು ವಾಟ್ನಿಯಲ್ಲಿ ನಮ್ಮ ತಂದೆಗೆ ಸರ್ವೆ ನಂ.55/1 ರ ಜಮೀನು ಬಂದಿದೆ. ನಮ್ಮ ತಂದೆಯ ಸಹೋದರರಿಗೆ ಸರ್ವೆ ನಂ.50

ಪಾಲಿಗೆ ಬಂದಿದೆ. ಸರ್ವೆ ನಂ.50 ನನ್ನ ತಂದೆಯ ಸಹೋದರರು ಉಳುಮೆ ಮಾಡುತ್ತಾರೆ. ಸರ್ವೆ ನಂ.55/1 ಜಮೀನು ನಾನು ಸಾಗುವಳಿ ಮಾಡುತ್ತಿದ್ದೇನೆ.

**ಪಾಟೀ ಸವಾಲುಃ 2 ಮತ್ತು 4 ನೇ ಪ್ರತಿವಾದಿ ಪರ ಶ್ರೀ.ವಿ.ಎನ.ಪಿ. ವಕೀಲರಿಂದಃ**

ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿರುವುದರಿಂದ ಮುಂದುವರೆದ ಪಾಟೀ ಸವಾಲು ಮುಂದುಡಲಾಯಿತು.

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,
ಖಾನಾಪೂರ .**